## ಸ್ಟಿರಾಯಿಡ್‌ಗಳ ಹಾವಳಿ

ಇಂದು ದೇಹವರ್ಧಕ ಸ್ಪರ್ಧೆಗಳಲ್ಲಿ ಭಾಗವಹಿಸುವವರು, ಜಿಮ್‌ನಲ್ಲಿ ಟ್ರೈನರ್ ಆಗಿರುವವರು, ಕುಸ್ತಿಪಟುಗಳು-ಹೀಗೆ ಒಂದು ವರ್ಗದ ಜನರಲ್ಲಿ – Anabolic Steroidಗಳ ಬಳಕೆ ಅಡೆ-ತಡೆ ಇಲ್ಲದೆ ಸಾಗುತ್ತಿದೆ. ಇದು ದೇಹದ ಒಳಗಿನ ಗಂಡು ಲಿಂಗಕ್ಕೆ ಸಂಬಂಧಿಸಿದ ರಾಸಾಯನಿಕವನ್ನು ಅಣಕು ಮಾಡುತ್ತಾ, ದೇಹದಲ್ಲಿ ಕಸುವನ್ನು ಹೆಚ್ಚಿಸಿ, ಒಳ್ಳೆಯ ಪ್ರದರ್ಶನ ನೀಡಲು ನೆರವಾಗುತ್ತದೆಯೇನೋ ಹೌದು! ಆದರೆ ಈ ರೀತಿಯ ಕೃತಕ, ಕಳ್ಳಮಾರ್ಗ ಅನುಸರಿಸಿದಾಗ, Steroidಗಳಿಂದ ಆಗುವ ದುಷ್ಪರಿಣಾಮಗಳು ತಲೆಯ ಮೇಲೆ ಕತ್ತಿಯಂತೆ ತೂಗುತ್ತಲೇ ಇರುತ್ತದೆ.

ದುಷ್ಪರಿಣಾಮಗಳು:

★ ಅತಿರಕ್ತದೊತ್ತಡ, ಹೃದಯಾಘಾತ, ಪಾರ್ಶ್ವವಾಯು, ಯಕೃತ್ ಹಾಗೂ ಮೂತ್ರಪಿಂಡಗಳ ಅವನತಿ, ಅಸಹಜ ರಕ್ತ ಹೆಪ್ಪುಗಟ್ಟುವಿಕೆ, ಕೊಬ್ಬಿನ ಅಂಶದ ಶೇಖರಣೆ ಇತ್ಯಾದಿ ಗಂಭೀರ ಜೀವಕ್ಕೇ ಅಪಾಯಕಾರಿಯಾಗುವ ಪರಿಣಾಮಗಳು.

★ ಗಂಡಸರಲ್ಲಿ ವೀರ್ಯಾಣುಗಳ ಸಂಖ್ಯೆಯಲ್ಲಿ ಇಳಿಮುಖ, ಸಂತಾನೋತ್ಪತ್ತಿಯಲ್ಲಿ ಕ್ಷೀಣಿಸುವಿಕೆ, ಬೀಜದ ಗಾತ್ರದಲ್ಲಿ ಕುಗ್ಗುವಿಕೆ, ಲೈಂಗಿಕ ನಿಶ್ಶಕ್ತಿ, ತಲೆಕೂದಲ ಉದುರುವಿಕೆ, ಜನನೇಂದ್ರಿಯ ಗ್ರಂಥಿಯ ಅರ್ಬುದ ಕಾಯಿಲೆಯ ಸಂಭವ, ಹೆಣ್ಣಿನ ಸ್ತನದ ರೀತಿಯ ಬೆಳವಣಿಗೆ ಇತ್ಯಾದಿ ಕಾಣಿಸಿಕೊಳ್ಳಬಹುದು.

★ ಕಣ್ಣಿನಲ್ಲಿ, ಮೂತ್ರಪಿಂಡದಲ್ಲಿ, ಮಾಂಸಖಂಡಗಳಲ್ಲಿ, ಉದರದಲ್ಲಿ, ಯಕೃತ್, ಮೂಳೆ-ಚರ್ಮ ಇವುಗಳಲ್ಲಿ ತೊಂದರೆಗಳು ಶುರುವಾಗುತ್ತವೆ.

★ ಮಾನಸಿಕವಾಗಿಯೂ ಸಿಟ್ಟು, ಸಿಡುಕುತನ, ತೀವ್ರ ಮನೋವ್ಯಾಕುಲತೆ, ಚಂಚಲತೆ, ಅಸ್ಥಿರ ಮನಃಸ್ಥಿತಿ, ಭ್ರಮೆ -ಭ್ರಾಂತಿ, ಉನ್ಮಾದ, ಖಿನ್ನತೆ, ವ್ಯಕ್ತಿತ್ವ- ಸ್ವಭಾವ ಬದಲಾವಣೆ, ತೀವ್ರ ಚಡಪಡಿಕೆ, ಹಿಂಸಾ ಪ್ರವೃತ್ತಿ, ಆತಂಕ, ಮನೋಬೇನೆ, ನಿದ್ರಾಹೀನತೆ, ಸಂಶಯದ ಗೀಳು ಇವುಗಳೂ ಉಂಟಾಗಬಹುದು.

ಕೇವಲ ಬಾಹ್ಯರೂಪಕ್ಕೋಸ್ಕರ ಈ Steroid ಗಳ ಬಳಕೆ ಮಾಡಿದಾಗ ಹಲವು ಆಂತರಿಕ ಅಂಗಗಳಿಗೂ ಹಾನಿಯಾಗುತ್ತದೆ ಎಂಬ ಅರಿವು ಇಲ್ಲಿ ಮುಖ್ಯ! ಬೀದಿಯಲ್ಲಿ ಹೋಗುತ್ತಿದ್ದ ಮಾರಿಯನ್ನು ಈ ಕಾಯವೆಂಬ ಮನೆಯೊಳಗೇ ಆಮಂತ್ರಿಸುವ ಬಗ್ಗೆ ಎಚ್ಚರದಿಂದಿರಿ.

ರೋಗಿಯನ್ನು ಶಾಂತವಾಗಿಸುವ ಕಾರಣ, ಇದನ್ನು ರೋಗಿಗಳು ಅಧಿಕ ಪ್ರಮಾಣದಲ್ಲೋ ಅಥವಾ ತಮಗೆ ಇಷ್ಟವಾದಂತೆ ಬಳಸಿ, ದುರ್ಬಳಕೆ ಮಾಡಬಹುದು.

6) ಬೊಜ್ಜು ನಿವಾರಕ ಔಷಧಿಗಳು (fat busting drugs): ಅತಿ ಬೊಜ್ಜು ನಿವಾರಣೆಗೆ ಬಳಕೆಯಾಗುವ ಔಷಧಿಗಳಲ್ಲಿ ಕೆಲವೊಮ್ಮೆ ಹಸಿವನ್ನು ತಗ್ಗಿಸಿ, ಚಟುವಟಿಕೆ ಹೆಚ್ಚಿಸಲು ಪ್ರಚೋದಕ ಮದ್ದನ್ನು ಬಳಸಿರುತ್ತಾರೆ. ಇದರ ದಾಸರಾಗಲು ರೋಗಿಗಳಿಗೆ ಜಾಸ್ತಿ ಹೊತ್ತು ಬೇಕಾಗೊಲ್ಲ. ಇವೆಲ್ಲಾ ಅಲ್ಲದೆ, ಇನ್ನೂ ಬೇಕಾದಷ್ಟು ಮಾತ್ರೆಗಳು ಭೇದಿಜನಕ ಸಿರಪ್ಪುಗಳು (laxatives), ದೇಹವರ್ಧಕ ಸ್ಟಿರಾಯಿಡ್‌ಗಳು, ಹಲವಾರು ನರಸಂಬಂಧೀ ಮಾತ್ರೆಗಳು, ಒಳಪದಾರ್ಥಗಳೇನೆಂದೇ ಅರಿಯದ ಹತ್ತು ಹಲವು ಪುಡಿ ಕಷಾಯಗಳು, ಇತ್ಯಾದಿಗಳಿಗೆ ಅಂಟಿಕೊಂಡು, ಅದರ ದುರ್ಬಳಕೆ ಮಾಡುವವರ ಸಂಖ್ಯೆ ಏನೂ ಕಡಿಮೆ ಇಲ್ಲ.

### ವಿಷವರ್ತುಲದ ಸೃಷ್ಟಿ

ಆತಂಕ ನಿವಾರಣಾ ಗುಳಿಗೆಗಳಾದ (Anti anxiety drugs) **benzodiapines** ಅನ್ನೋ ಕುಟುಂಬಕ್ಕೆ ಸೇರುವ ಮಾತ್ರೆಗಳ ಉದಾಹರಣೆ ಇಟ್ಟುಕೊಂಡು, ಹೇಗೆ ಈ ವೈದ್ಯಕೀಯ ಮಾತ್ರೆಗಳ ದುರ್ಬಳಕೆ ಒಂದು ವಿಷವರ್ತುಲವನ್ನು ಸೃಷ್ಟಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳೋಣ.

ಹಲವಾರು ಸಲ, ಈ ಗುಳಿಗೆ ನುಂಗೋ ಚಾಳಿಯ ಹಿಂದೆ ಮುಗ್ಧ, ಅನಿವಾರ್ಯ ಕಾರಣಗಳಿರುತ್ತವೆ. ಉದಾಹರಣೆಗೆ, ರೋಗಿಯೊಬ್ಬ ಒಂದು ವೈದ್ಯರಲ್ಲಿ ತನಗೆ ನಿದ್ದೆ ಬರುತ್ತಿಲ್ಲವೆಂದೂ, ತೀರಾ ಟೆನ್‌ಷನ್ ಆಗುತ್ತಿದೆ ಎಂದೂ ಅವಲತ್ತುಕೊಳ್ಳುತ್ತಾನೆ. ಆ ರೋಗಿ ಯಾರೂ ಆಗಿರಬಹುದು. ಸಿಕ್ಕಾಪಟ್ಟೆ ಕೆಲಸದ ಹೊರೆ ಹೊತ್ತು ದುಡಿಯುವ ಶ್ರೀಮಂತ ಉದ್ಯಮಿಯಿಂದ ಹಿಡಿದು, ಮದುವೆ ರಾತ್ರಿಯ ಹಿಂದಿನ ದಿನ ಆತಂಕದಿಂದ ಬಳಲುವ ಮದುಮಗನವರೆಗೆ! ಆಗ ಆ ವೈದ್ಯರು ಅದಕ್ಕೆ ಈ ಆತಂಕ ನಿವಾರಣಾ ಮಾತ್ರೆಗಳನ್ನು ಕೊಡುತ್ತಾರೆ. ಜೊತೆಗೆ 2—3 ವಾರದಲ್ಲಿ ಕಡಿಮೆ ಮಾಡಿ ನಿಲ್ಲಿಸುವಂತೆಯೂ ಸೂಚಿಸುತ್ತಾರೆ. ಆದರೆ ಮೂಲ ಕಾರಣ ನಿವಾರಣೆಯಾಗದೇ, ಆತಂಕ ನಿವಾರಿಸಲಾಗದು. ಹಾಗಾಗಿ ರೋಗಿ ಅದನ್ನು ನಿಲ್ಲಿಸಲು ತಯಾರಾಗುವುದಿಲ್ಲ. ವೈದ್ಯರು ಕೊಡದಿದ್ದರೆ ಇವರೇ ಅದನ್ನು ತೆಗೆದುಕೊಳ್ಳುತ್ತಾರೆ.

ಹಠಾತ್ತನೆ ನಿಲ್ಲಿಸಲು ಹೋದರೂ ಹಿಂತೆಗೆತದ ಹಾವಳಿ ಶುರುವಾಗಿ ಬಿಡುತ್ತೆ. ಹೀಗಾದಾಗ, ನಿದ್ರಾಹೀನತೆ, ಚಡಪಡಿಕೆ, ಕೈ ಕಾಲು ಅದುರುವಿಕೆ, ತೊದಲುವಿಕೆ, ಸಿಡುಕುತನ, ಬೇಜಾರು, ವಾಕರಿಕೆ, ಹಸಿವಿನಲ್ಲಿ ಏರುಪೇರು, ಅಸಹಜ ವರ್ತನೆ,

